<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.</u>

<u>ಸಿ.ಸಿ. ನಂ. 2126/2021</u>

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ಈ. ಆನಂದ | ಸಿಡಬ್ಲ್ಯೂ-25 |
| ತಂದೆ ಹೆಸರು | : | ಈರಣ್ಣ | ಪಿ ಡಬ್ಲ್ಯೂ- 12 |
| ವಯಸ್ಸು | : | 60 ವರ್ಷ | |
| ಉದ್ಯೋಗ | : | ನಿವೃತ್ತ ಪೊಲೀಸ್ ನಿರೀಕ್ಷಕರು | |
| ವಾಸಸ್ಥಳ | : | ಚಳ್ಳಕೆರೆ | ದಿಃ 29-07-2026. |

<u>ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ</u>

ಜುಲೈ 2019 ರಿಂದ ಸೆಪ್ಟಂಬರ್ 2020 ರವರೆಗೆ ನಾನು ಚಳ್ಳಕೆರೆ ವೃತ್ತದ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 17.11.2019 ರಂದು ಪ್ರಕರಣದ ಕಡತವನ್ನು ಚಾಸಾ-24 ರವರಿಂದ ಪಡೆದುಕೊಂಡು, ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲಿಸಿರುತ್ತೇನೆ.

ಅದೇ ದಿನ ಚಾಸಾ-8, 9, 1 ಮತ್ತು 2 ರವರ ಮರು ಹೇಳಿಕೆಗಳನ್ನು ಪಡೆದಿರುತ್ತೇನೆ. ನಂತರ ಚಾಸಾ-14 ರಿಂದ 16, 19 ಮತ್ತು 20 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

ದಿನಾಂಕ 06.12.2019 ರಂದು ಈ ಪ್ರಕರಣದಲ್ಲಿ ಮೃತರಾದ ಚನ್ನಯ್ಯ ರವರ ಪಿ ಎಂ ವರದಿ ಚಳ್ಳಕೆರೆ ವೈದ್ಯಾಧಿಕಾರಿಯವರಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿ ಕೊಂಡಿರುತ್ತೇನೆ.

ಸಾಕ್ಷಿಗೆ ನಿಪಿ.7 ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.7(ಎ)ಅಂತಾ ಗುರುತಿಸಲಾಯಿತು.

ದಿನಾಂಕ 24.12.2019 ರಂದು ಅಪಘಾತ ಪಡಿಸಿದ ವಾಹನದ ಪತ್ತೆಗಾಗಿ ನೇಮಿಸಿದದ ಚಾಸಾ-21 ರವರು ಅಪಘಾತ ಪಡಿಸಿದ ವಾಹನವನ್ನು ಚಳ್ಳಕೆರೆ ಠಾಣಾ ಆವರಣದಲ್ಲಿ ತಂದದು ಹಾಜರು ಪಡಿಸಿದ್ದು, ಸದರಿ ವಾಹನವನ್ನು ಪಂಚರಾದ ಚಾಸಾ-19 ಮತ್ತು 11 ರವರ ಸಮಕ್ಷಮದಲ್ಲಿ ಬೆಳಿಗ್ಗೆ 10-30 ರಿಂದ 11-15 ವರರೆಗೆ ಪಂಚನಾಮೆ ಕ್ರಮ ಜರುಗಿಸಿ ಯಾಂತ್ರಿಕ ತಪಾಸಣೆಗಾಗಿ ತಡೆ ಹಿಡಿಯಲಾಗಿರುತ್ತದೆ.

ಸಾಕ್ಷಿಗೆ ನಿಪಿ12 ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.12(ಸಿ)ಅಂತಾ ಗುರುತಿಸಲಾಯಿತು.

ಅದೇ ದಿನ ಅಪಘಾತಕ್ಕೆ ಸಂಬಧಿಸಿದ ವಾಹನಗಳ ಯಾಂತ್ರಿಕ ತಪಾಸಣೆ ಮಾಡಿ ಐ ಎಂ ವಿ ವರದಿ ನೀಡುವಂತೆ ಚಿತ್ರದುರ್ಗ ಆರ್ ಟಿ ಓ ಕಚೇರಿಗೆ ಮನವಿಯನ್ನು ಸಲ್ಲಿಸಿರುತ್ತೇನೆ.

ದಿನಾಂಕ 26.06.2020 ರಂದು ಆರ್ ಟಿ ಓ ಕಚೇರಿರವಂದ ಐ ಎಂ ವಿ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ಸಾಕ್ಷಿಗೆ ನಿಪಿ8 ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.8(ಎ)ಅಂತಾ ಗುರುತಿಸಲಾಯಿತು.

ದಿನಾಂಕ 28.09.2020 ರಂದು ನನಗೆ ವರ್ಗಾವಣೆಯಾದ ಹಿನ್ನಲೆಯಲ್ಲಿ ಚಾಸಾ-26 ರವರಿಗೆ ಕಡತವನ್ನು ಹಸ್ತಾಂತರಿಸಿರುತ್ತೇನೆ.

ಸಾಕ್ಷಿಗೆ ನಾಲ್ಕು ಭಾವಚಿತ್ರಗಳನ್ನು ತೋರಿಸಲಾಗಿ ಸದರಿ ಭಾವಚಿತ್ರಗಳಲ್ಲಿ ಕಾಣುವ ವಾಹನವನ್ನು ನೋಡಿ ಪಂಚನಾಮೆ ಸಮಯದಲ್ಲಿ ತಡೆಹಿಡಿಯಲಾದ ವಾಹನ ಎಂದು ಗುರುತಿಸಿದ ಮೇರೆಗೆ, ಸದರಿ ಭಾವಚಿತ್ರಗಳನ್ನು ಕ್ರಮವಾಗಿ ನಿಪಿ.20 ರಿಂದ 23 ಅಂತ ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಸಿ.ವಿ., ಆರೋಪಿಯ ಪರ ವಕೀಲರಿಂದಃ**

ದಿನಾಂಕ 17.11.2019 ರಂದು ಪ್ರಕರಣದ ಕಡತವನ್ನು ಚಾಸಾ-24 ರವರಿಂದ ಪಡೆದುಕೊಂಡು, ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲಿಸಿರುತ್ತೇನೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ.

ದಿನಾಂಕ 24.12.2019 ರಂದು ಅಪಘಾತ ಪಡಿಸಿದ ವಾಹನದ ಪತ್ತೆಗಾಗಿ ನೇಮಿಸಿದದ ಚಾಸಾ-21 ರವರು ಅಪಘಾತ ಪಡಿಸಿದ ವಾಹನವನ್ನು ಚಳ್ಳಕೆರೆ ಠಾಣಾ ಆವರಣದಲ್ಲಿ ತಂದದು ಹಾಜರು ಪಡಿಸಿದ್ದು, ಸದರಿ ವಾಹನವನ್ನು ಪಂಚರಾದ ಚಾಸಾ-19 ಮತ್ತು 11 ರವರ ಸಮಕೆಮದಲ್ಲಿ ಬೆಳಿಗ್ಗೆ 10-30 ರಿಂದ 11-15 ವರರೆಗೆ ಪಂಚನಾಮೆ ಕ್ರಮ ಜರುಗಿಸಿ ಯಾಂತ್ರಿಕ ತಪಾಸಣೆಗಾಗಿ ಇಡೆ ಹಿಡಿಯಲಾಗಿರುತ್ತದೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ.

ಚಾಸಾ-8, 9, 1 ಮತ್ತು 2 ರವರ ಮರು ಹೇಳಿಕೆಗಳನ್ನು ಪಡೆದಿರುತ್ತೇನೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನಂತರ ಚಾಸಾ-14 ರಿಂದ 16, 19 ಮತ್ತು 20 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ.

ತನಿಖೆಯಲ್ಲಿ ಆರೋಪಿಯು ಯಾವುದೇ ತಪ್ಪು ಮಾಡಿಲ್ಲ ಎಂದು ಕಂಡು ಬಂದು ಸುಳ್ಳು ವರದಿಯನ್ನು ವರ್ಗಾಯಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ